-

ಅ.ದಾ. ಸಂಖ್ಯೆ- 92/2018
ಪಿಡಬ್ಲ್ಯೂ- 1

ದಿನಾಂಕಃ 06-11-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ. ಸಿ.ಪಿ.    ವಕೀಲರಿಂದ.

ನಾನು ಬಿ.ಎಸ್,ಸಿ ಪದವಿ  ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಹುಟ್ಟೂರು ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲೆ. ಸುಮಾರು 45 ವರ್ಷಗಳಿಂದ ತೀರ್ಥಹಳ್ಳಿಯಲ್ಲಿಯೇ ವಾಸವಾಗಿದ್ದೇನೆ. ನಾನು ಪ್ರೌಢ ಶಾಲೆಯವರೆಗೂ ಕೊಪ್ಪ ತಾಲ್ಲೂಕಿನಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನಂತರ ಬಿ.ಎಸ್.ಸಿ ವರೆಗೆ ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸ  ಮಾಡಿರುತ್ತೇನೆ. ನನ್ನ ತಂದೆ ಕೃಷಿಕರು. ನನ್ನ ತಂದೆ ಕೊಪ್ಪ ತಾಲ್ಲೂಕಿನ ಕುಂಬಾರಕೊಪ್ಪ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಿದ್ದರು. ನನ್ನ ತಂದೆಯಿಂದ ನನಗೆ ಸ್ವಲ್ಪ ಜಮೀನು ಕುಂಬಾರುಕೊಪ್ಪ ಗ್ರಾಮದ ಸರ್ವೆ ನಂ. 14 ರಲ್ಲಿ 30 ಗುಂಟೆ, ಸರ್ವೆ ನಂ. 11 ರಲ್ಲಿ 26 ಗುಂಟೆ, ಸರ್ವೆ ನಂ. 12 ರಲ್ಲಿ 10 ಗುಂಟೆ, ಸರ್ವೆ ನಂ. 52 ರಲಿ 4 ಎಕರೆ ವಿಸ್ತೀರ್ಣದ  ಕೃಷಿ ಜಮೀನು ಬಂದಿರುತ್ತವೆ. ಸದರಿ ಆಸ್ತಿಗಳು ನೊಂದಾಯಿತ ಹಿಸ್ಸಾ ಪತ್ರದ ಮೂಲಕ  ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತವೆ.

2. ತಾಲ್ಲೂಕು ಕಛೇರಿ, ಉಪವಿಭಾಗಾಧಿಕಾರಿ ಕಛೇರಿ ಮತ್ತು ನ್ಯಾಯಾಲಯಗಳಿಗೆ ನನ್ನ ಕೆಲಸಕ್ಕೆ ಓಡಾಡಿದ್ದರಿಂದ ಸದರಿ ಕಛೇರಿಗಳ ಕೆಲಸದ ಅನುಭವ ಇರುತ್ತದೆ. ತೀರ್ಥಹಳ್ಳಿ,  ಕೊಪ್ಪ ಮತ್ತು ಶಿವಮೊಗ್ಗ ನ್ಯಾಯಾಲಯಗಳಲ್ಲಿ ಬೇರೆ ಬೇರೆ  ಪ್ರಕರಣಗಳಲ್ಲಿ ಹಾಜರಾಗಿದ್ದೇನೆ ಎಂದರೆ ಸರಿ.

3. ಈ ದಾವಾ ಸ್ವತ್ತಿನ ಮೂಲ  ಮಾಲೀಕರಾದ ವೆಂಕಟರಮಣ ಜೋಯಿಸ್ ರವರ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರ ಮಕ್ಕಳಿಂದ ನಾನು ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.  ಸದರಿ ವೆಂಕಟರಮಣ ಜೋಯಿಸ್  ರವರು ಮರಣ ಹೊಂದಿದ ದಿನಾಂಕ ನನಗೆ ನೆನಪಿಲ್ಲ. ವೆಂಕಟರಮಣ ಜೋಯಿಸ್  ರವರ ವಂಶವೃಕ್ಷ ನನ್ನ ಬಳಿ ಇರುವುದಿಲ್ಲ. ವೆಂಕಟರಮಣ ಜೋಯಿಸ್  ರವರು ಏನು ಉದ್ಯೋಗ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ವೆಂಕಟರಮಣ ಜೋಯಿಸ್  ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ವೆಂಕಟರಮಣ ಜೋಯಿಸ್  ರವರ ಮಕ್ಕಳ ಬಗ್ಗೆ ಕೇಳಿ ತಿಳಿದುಕೊಂಡಿದ್ದೆನು. ಸದರಿ ಆಸ್ತಿಯನ್ನು ಖರೀದಿ ಮಾಡುವಾಗ ಯಾವ  ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೆನು ಎಂದು ನನಗೆ ಈಗ ನೆನಪಿಲ್ಲ. ಸದರಿ ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಸದರಿ ಖರೀದಿ ಪತ್ರವನ್ನು ಯಾರು ಬರವಣಿಗೆ ಮಾಡಿದ್ದರು ಎಂದು ನನಗೆ ಈಗ ನೆನಪಿಲ್ಲ. ದಾವಾ ಆಸ್ತಿಯನ್ನು ಸುಧಾ ಜೋಯಿಸ್, ನರೇಂದ್ರ ಜೋಯಿಸ್, ರಘುನಂದನ್ ಜೋಯಿಸ್, ಸುಧೀರ್  ಜೋಯಿಸ್ ಮತ್ತು ಸುಹಾಸ್  ಜೋಯಿಸ್ ರವರಿಂದ ಖರೀದಿ ಮಾಡಿರುತ್ತೇನೆ. ಸದರಿಯವರ ಜಿ.ಪಿ.ಎ ಹೋಲ್ಡರ್ ಆದಂತಹ ನರೇಂದ್ರ ಜೋಯಿಸ್ ಮತ್ತು ಗುರುದತ್ ಜೋಯಿಸ್ ರವರ ಮೂಲಕ ಖರೀದಿ ಮಾಡಿರುತ್ತೇನೆ. ಸದರಿ ಜಿ.ಪಿ.ಎ ನೊಂದಣಿ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ಮೇಲೆ ಹೇಳಿದ ಎಲ್ಲಾ  ಮಾರಾಟಗಾರರ ಪರಿಚಯ ಇರುತ್ತದೆ. ಸದರಿ ಮಾರಾಟಗಾರರ ವಾಸ ಸ್ಥಳದ ಬಗ್ಗೆ ನನಗೆ ನಿಖರ ಮಾಹಿತಿ ಇಲ್ಲ. ನನ್ನ ಆಸ್ತಿಯ ಮಾರಾಟಗಾರರ ಮೂಲ ಜಿ.ಪಿ.ಎ ನನ್ನ ಬಳಿ ಇರುತ್ತದೆ. ಮೂಲ ಕ್ರಯಪತ್ರವೂ ಕೂಡ ನನ್ನ ಬಳಿ ಇರುತ್ತದೆ ಸದರಿ ಮೂಲ ಕ್ರಯಪತ್ರ  ಮತ್ತು ಮೂಲ ಜಿಪಿ.ಎ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನ ಅಭ್ಯಂತರ ಇರುವುದಿಲ್ಲ.

4. ನಿಪಿ-25 ನ್ನು ನಾನು  ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ-25 ರಲ್ಲಿ ರಘುನಂದನ್ ಜೋಯಿಸ್ ಮತ್ತು ಗುರುದತ್ ಜೋಯಿಸ್ ರವರ ವಿಳಾಸ  ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-25 ರಲ್ಲಿ  ಸದರಿಯವರ ಸಂಪೂರ್ಣ ವಿಳಾಸ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸಂದರ್ಭದಲ್ಲಿ ಸದರಿಯವರು  ತಮ್ಮ ಗುರುತಿನ ಚೀಟಿಗಳನ್ನು ಹಾಜರುಪಡಿಸಿದ್ದರು ಎಂದು ನುಡಿಯುತ್ತಾರೆ.  ನಿಪಿ-25 ನ್ನು ಮಾಡಿಕೊಳ್ಳುವ ಪೂರ್ವದಲ್ಲಿ ಯಾವುದೇ

ಕ್ರಯಒಪ್ಪಂದ ಪತ್ರ ಆಗಿರುವುದಿಲ್ಲ ನಿಪಿ-25 ರ ನೊಂದಣಿಯ ಪೂರ್ವದಲ್ಲಿ ದಾವಾ ಆಸ್ತಿಯು ಅಳತೆ ಆಗಿ ಪೋಡಿ ಆಗಿರುತ್ತದೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ